ವಿಷಯ:- ಬಸವಕಲ್ಯಾಣದಲ್ಲಿ ರಸ್ತೆ ಡಾಂಬರೀಕರಣ.

110(571)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಸವಕಲ್ಯಾಣದ ಅವರಿನಮನೆ, ಅಕ್ಕನಾಗಮ್ಮನ ಗವಿ, ಪೋಳಗಿ, ಮಾರೇನ ಹೊಂಡ, ಮಾಚೀದೇವರಗುಡ್ಡ, ಅನುಭವ ಮಂಟಪ ರಸ್ತೆಗಳು ಪೂರ್ತಿಹಾಳಾಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಶೀಘ್ರವಾಗಿ ಈ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು):-

ಅ) ಹೌದು

ಆ) ಅನುದಾನ ಲಭ್ಯತೆಗನುಗುಣವಾಗಿ ಡಾಂಬರೀಕರಣ ಕೈಗೊಳ್ಳಲಾಗುವುದು.

ವಿಷಯ:- ವಿಜಾಪುರ ಜಿಲ್ಲೆಯ ಅಗರ್‌ಖೆಡ್ ಸೇತುವೆ ಕುರಿತು.

111(240)

ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಿಜಾಪುರ ಜಿಲ್ಲೆಯ ಹಿಂಡಿ ತಾಲ್ಲೂಕಿನಲ್ಲಿ ನಿರ್ಮಿಸಲಾಗುತ್ತಿರುವ ಭೀಮಾ ನದಿಗೆ ಅಡ್ಡಲಾಗಿ ಅಂತರ ರಾಜ್ಯ ರಸ್ತೆ ಜೋಡಣೆಯ ಅಗರ್‌ಖೆಡ್ ಸಮೀಪವಿರುವ ಸೇತುವೆಯ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಗೆ ಎಂದು ಮಂಜೂರಾತಿ ದೊರೆತಿದೆ? ಸದರಿ ಕಾಮಗಾರಿ ಯಾವ ಹಂತದಲ್ಲಿದೆ? ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು;

ಇ) ಸರ್ಕಾರವು ನಿಗದಿಪಡಿಸಿದ ಅಂದಾಜು ವೆಚ್ಚಕ್ಕಿಂತ ಈಗ ಅಂದಾಜು ವ್ಯತ್ಯಾಸವಾಗಿರುವುದರಿಂದ ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಲು ವಿಳಂಬ ಮಾಡುತ್ತಿರುವುದು ನಿಜವೇ? ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹೌದು.

ಆ) ಈ ಸೇತುವೆ ನಿರ್ಮಾಣ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಆರ್ಥಿಕ ಪ್ರಾಮುಖ್ಯತೆ ಯೋಜನೆ ಅಡಿಯಲ್ಲಿ ದಿನಾಂಕ 7-11-1984ರಲ್ಲಿ ಮಂಜೂರಾತಿ ದೊರೆತಿದೆ. ರಾಜ್ಯ ಸರ್ಕಾರದಿಂದ 120.00 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ದಿನಾಂಕ 15-3-1985 ರಲ್ಲಿ ದೊರೆತಿದ್ದು